# ವಿಷಯ – ಪ್ರಥಮ ಭಾಷೆ ಕನ್ನಡ

## ಸಿ.ಎಸ್.ಎ.ಎಸ್ ಮೌಲ್ಯಮಾಪನ

## ಸಾಮರ್ಥ್ಯಗಳ ಪಟ್ಟಿ

**ತರಗತಿ – 8**

| ಕ್ರ. ಸಂ. | ಕ್ಷೇತ್ರ | ಕಲಿವಿನ ಫಲ | ಕ್ರ. ಸಂ. | ಸಾಮರ್ಥ್ಯಗಳು |
|---|---|---|---|---|
| 1 | ವ್ಯಾಕರಣ | ಸೈದ್ಧಾಂತಿಕ ವ್ಯಾಕರಣ ನಿಯಮಗಳನ್ನು ತಿಳಿಯುತ್ತಾರೆ ಮತ್ತು ಪ್ರಾಯೋಗಿಕ ವ್ಯಾಕರಣಾಂಶಗಳನ್ನು ಬಳಸುತ್ತಾರೆ. | 1 | ಕನ್ನಡ ವರ್ಣಮಾಲೆಯಲ್ಲಿನ ಸ್ವರ, ವ್ಯಂಜನ, ಯೋಗವಾಹ ಮತ್ತು ಗುಣಿತಾಕ್ಷರ, ಸಂಯುಕ್ತಾಕ್ಷರಗಳನ್ನು ಗುರ್ತಿಸುವರು. |
| | | | 2 | ಲೇಖನ ಚಿಹ್ನೆಗಳನ್ನು ಬಳಸುವರು. |
| | | | 3 | ಲೇಖನ ಚಿಹ್ನೆಗಳನ್ನು ಗುರ್ತಿಸಿ ಓದುವರು, ವಾಕ್ಯ ರಚನೆಯ ಕ್ರಮವನ್ನು ತಿಳಿಯುವರು. |
| | | | 4 | ಕನ್ನಡ ಸಂಧಿಕಾರ್ಯದ ನಿಯಮಗಳನ್ನು ಅರ್ಥೈಸಿಕೊಂಡು ಗುರ್ತಿಸುವರು. |
| | | | 5 | ನಾಮಪದಗಳನ್ನು, ಕ್ರಿಯಾಪದಗಳನ್ನು ವರ್ಗೀಕರಿಸುವರು |
| 2 | ವ್ಯಾಕರಣ | ದೇಶೀಯ, ಅನ್ಯ ದೇಶೀಯ, ತತ್ಸಮ, ತದ್ಭವ ಇತ್ಯಾದಿ ವ್ಯಾಕರಣಾಂಶಗಳ ಬಗ್ಗೆ ತಿಳಿಯುತ್ತಾರೆ. ಪದಸಂಪತ್ತು ಹೆಚ್ಚಿಸಿಕೊಳ್ಳುತ್ತಾರೆ. | 6 | ದೇಶೀಯ, ಅನ್ಯದೇಶೀಯ ಪದಗಳನ್ನು ಪತ್ತೆಹಚ್ಚುವರು. |
| | | | 7 | ತತ್ಸಮ – ತದ್ಭವ ಪಟ್ಟಿಮಾಡುವರು |
| 3 | ವ್ಯಾಕರಣ | ಕಾವ್ಯ ಕವಿತೆಗಳನ್ನು ಓದಿ ಅವುಗಳಲ್ಲಿನ ಛಂದಸ್ಸು, ಅಲಂಕಾರ, ಪ್ರಾಸ ಮತ್ತು ವ್ಯಾಕರಣ ವಿಶೇಷತೆಯನ್ನು ತಿಳಿದು ಅರ್ಥಮಾಡಿಕೊಳ್ಳುತ್ತಾರೆ. | 8 | ಪ್ರಸ್ತಾರ ಹಾಕುವುದನ್ನು ಅರ್ಥೈಸಿಕೊಳ್ಳುವರು. |
| | | | 9 | ನೀಡಿರುವ ಪದ್ಯದಲ್ಲಿನ ಪ್ರಾಸ ಪದಗಳನ್ನು ಪತ್ತೆಹಚ್ಚುವರು / ದಿನನಿತ್ಯ ಜೀವನದಲ್ಲಿ ಅವುಗಳನ್ನು ಅಭಿವ್ಯಕ್ತಪಡಿಸುವರು. |

| | | | | |
|---|---|---|---|---|
| | | | 10 | ವಾಕ್ಯಗಳಲ್ಲಿನ ಕರ್ಮಪದ, ಕ್ರಿಯಾಪದಗಳನ್ನು ವಿಂಗಡಿಸುವರು. |
| 4 | ಗದ್ಯ | ಕವಿತೆ, ಕಥೆ, ನಾಟಕ, ಪ್ರಬಂಧ, ವಿಚಾರಗೋಷ್ಠಿ ಅಲ್ಲದೆ ಹಳಗನ್ನಡ ಕೀರ್ತನೆ, ಜನಪದ, ವಚನಸಾಹಿತ್ಯ ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಆಲಿಸಿ ಅರ್ಥ ಮಾಡಿಕೊಂಡು ಸರಳ ವಾಕ್ಯಗಳಲ್ಲಿ ಟಿಪ್ಪಣಿ ಮಾಡಿಕೊಳ್ಳುತ್ತಾರೆ. | 11 | ಕೊಟ್ಟಿರುವ ಪ್ರಬಂಧವನ್ನು ಓದಿ ಅರ್ಥೈಸಿಕೊಂಡು ಸರಳ ವಾಕ್ಯಗಳಲ್ಲಿ ಅಭಿವ್ಯಕ್ತಪಡಿಸುವರು. |
| | ಪದ್ಯ | | 12 | ಜನಪದ ಸಾಹಿತ್ಯವನ್ನು ಓದಿ ಅರ್ಥೈಸಿಕೊಂಡು ತನ್ನ ಅಭಿಪ್ರಾಯವನ್ನು ಸರಳವಾಕ್ಯಗಳಲ್ಲಿ ವ್ಯಕ್ತಪಡಿಸುವರು. |
| | | | 13 | ನಡುಗನ್ನಡ / ಹೊಸಗನ್ನಡ ಶೈಲಿಯ ಪದ್ಯ / ವಚನಗಳನ್ನು ಅರ್ಥೈಸಿಕೊಳ್ಳುವರು. |
| 5 | ಗದ್ಯ | ಓದುತ್ತ ಅಪರಿಚಿತ ಸನ್ನಿವೇಶ ಮತ್ತು ಘಟನೆಗಳ ಬಗೆಗೆ ಚಿಂತಿಸುತ್ತಾರೆ ಮತ್ತು ಆಗ ತಮ್ಮಲ್ಲಿ ಉದ್ಭವಿಸಿದ ಕಲ್ಪನೆ ಮತ್ತು ವಿಚಾರಗಳನ್ನು ಬರವಣಿಗೆಯಲ್ಲಿ ಸಾಂಕೇತಿಕ ಭಾಷೆಯ ಮೂಲಕ ಹೇಳುತ್ತಾರೆ. | 14 | ನುಡಿಗಟ್ಟು, ನಾಣ್ಣುಡಿಗಳ ಅರ್ಥವನ್ನು ಗ್ರಹಿಸಿ ಅಭಿವ್ಯಕ್ತಿಸುವರು. |
| | | | 15 | ಗಾದೆ ಮಾತುಗಳ ಅರ್ಥವನ್ನು ಗ್ರಹಿಸಿ ಸರಳ ಪ್ರಶ್ನಾವಳಿಗಳಿಗೆ ಉತ್ತರಿಸುವುದು. |
| 6 | ಗದ್ಯ | ತಮ್ಮ ಅನುಭವಗಳನ್ನು ತಮ್ಮದೇ ಭಾಷಾ ಶೈಲಿಯಲ್ಲಿ ಬರೆಯುತ್ತಾರೆ. ಲೇಖನದ ವಿವಿಧ ಪ್ರಕಾರಗಳ ಮತ್ತು ಶೈಲಿಗಳ ಪ್ರಯೋಗ ಮಾಡುತ್ತಾರೆ. | 16 | ಕಥೆ, ಪ್ರಬಂಧ, ಜೀವನ ಚರಿತ್ರೆ / ಪ್ರವಾಸಕಥನ ಮುಂತಾದ ಸಾಹಿತ್ಯ ಪ್ರಕಾರಗಳ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳುವರು. |
| | ಪದ್ಯ | | 17 | ಕಥೆ ಮತ್ತು ಕವನಗಳ ನಡುವಿನ ವ್ಯತ್ಯಾಸವನ್ನು ಅರಿಯುವರು / ಪದ್ಯಗಳ ವಿವಿಧ ಪ್ರಕಾರಗಳನ್ನು ಅರಿಯುವರು. |
| 7 | ಗದ್ಯ | ಟಿಪ್ಪಣಿ, ವರದಿ, ಪತ್ರ ಲೇಖನ, ಪ್ರಬಂಧ, ಆಹ್ವಾನ ಪತ್ರಿಕೆ, ಜಾಹಿರಾತು, ಪ್ರಕಟಣೆ ಇತ್ಯಾದಿ ದೈನಂದಿನ ವ್ಯವಹಾರಿಕ ಸಂದರ್ಭಗಳಲ್ಲಿ ಲಿಖಿತ ಅಭಿವ್ಯಕ್ತಿ ಕೌಶಲ ಬೆಳಸಿಕೊಳ್ಳುತ್ತಾರೆ. | 18 | ದೈನಂದಿನ ಜೀವನದಲ್ಲಿ ಒಂದು ಕಾರ್ಯಕ್ರಮದ ವರದಿ ಮಾಡುವುದನ್ನು ತಿಳಿಯುತ್ತಾರೆ. |
| | | | 19 | ಪತ್ರ ಲೇಖನ ಬರೆಯುವಾಗ ಗಮನಿಸಬೇಕಾದ ನಿಯಮಗಳನ್ನು ಪಾಲಿಸುತ್ತಾರೆ. |
| | | | 20 | ಜಾಹಿರಾತು, ಆಹ್ವಾನ ಪತ್ರಿಕೆಗಳನ್ನು ಓದಿ ತನ್ನ ಅಗತ್ಯತೆಗೆ ತಕ್ಕಂತೆ ಪ್ರತಿಕ್ರಿಯಿಸುತ್ತಾರೆ. |
| 8 | ಗದ್ಯ | ತಾವು ಓದಿದ ಗದ್ಯ, ಪದ್ಯ, ಕಥೆ, ಕಾವ್ಯಗಳನ್ನು ಕುರಿತು ಸತ್ಯಾಸತ್ಯತೆಯನ್ನು ಕುರಿತು ಮೌಲ್ಯಗಳ ಬಗೆಗೆ ತಮ್ಮ ನಿರ್ಧಾರವನ್ನು ಅಭಿವ್ಯಕ್ತಪಡಿಸುವುದು. | 21 | ತಾವು ಓದಿದ ಗದ್ಯ ಭಾಗದಲ್ಲಿನ ಮೌಲ್ಯಗಳನ್ನು ಗುರ್ತಿಸುವರು. |

| | | | | |
|---|---|---|---|---|
| | | | 22 | ತಾವು ಓದಿದ ಕಥೆಯಲ್ಲಿನ ಸಾರಾಂಶವನ್ನು ಅರಿತು ಪ್ರತಿಕ್ರಿಯೆ ನೀಡುವರು. |
| | | | 23 | ತಾವು ಓದಿದ ಪದ್ಯ ಅಥವಾ ಕಾವ್ಯದ ಮೌಲ್ಯವನ್ನು ಗುರ್ತಿಸುವರು. |
| | | | 24 | ತಾವು ಓದಿದ ಪದ್ಯ ಅಥವಾ ಕಾವ್ಯವನ್ನು ಓದಿ ಅದರ ಸಾರಾಂಶವನ್ನು (ಭಾವಾರ್ಥವನ್ನು) ಅಭಿವ್ಯಕ್ತಪಡಿಸುವರು / ಕ್ರಮಾನುಗತವನ್ನು ವ್ಯಕ್ತಪಡಿಸುವುದು. |
| | | | 25 | ಓದಿದ ಪದ್ಯಭಾಗದಲ್ಲಿನ ಹೊಸ ಪದಗಳಿಗೆ ಅರ್ಥ ತಿಳಿಯುವುದರ ಮೂಲಕ ಪದಸಂಪತ್ತು ಬೆಳಸಿಕೊಳ್ಳುವರು. |
| 9 | ಗದ್ಯ | ಅಭಿವ್ಯಕ್ತಿಯ ವಿಭಿನ್ನಶೈಲಿ ಮತ್ತು ರೂಪಗಳನ್ನು ಗುರುತಿಸುತ್ತಾರೆ ಮತ್ತು ತಾವೂ ಸ್ವತಃ ಬರವಣಿಗೆಯಲ್ಲಿ ತೊಡಗುತ್ತಾರೆ. | 26 | ತಾವು ಓದಿದ ಗದ್ಯದಲ್ಲಿನ ಪದಗಳಿಗೆ ವಿಭಿನ್ನಾರ್ಥಗಳನ್ನು ತಿಳಿದು ಸೃಜನಾತ್ಮಕವಾಗಿ ಅಭಿವ್ಯಕ್ತಪಡಿಸುವರು. |
| | | | 27 | ಒಂದು ಘಟನೆಯನ್ನು ಕ್ರಮಾನುಗತ ಸ್ವರೂಪದಲ್ಲಿ ವ್ಯಕ್ತಪಡಿಸುವರು. |
| | | | 28 | ನೀಡಿದ ಗದ್ಯದಲ್ಲಿ ವಿರುದ್ಧಾರ್ಥಕ ಪದಗಳನ್ನು ಗುರ್ತಿಸುವರು. |
| 10 | ಪದ್ಯ | ಗಾದೆ, ಕವಿತೆ, ನಾಟಕ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಸ್ವತಃ ಓದಿ ಅರ್ಥ ಮಾಡಿಕೊಂಡು ಅವುಗಳ ವಿವಿಧ ಶೈಲಿ ಪ್ರಕಾರಗಳ ಬಗೆಗೆ ತಿಳಿಯುತ್ತಾರೆ. | 29 | ಕವಿತೆ / ಪದ್ಯದ ವಿವಿಧ ಪ್ರಕಾರಗಳನ್ನು ಓದಿ ಅರ್ಥಮಾಡಿಕೊಂಡು ಪ್ರಶ್ನೆಗಳಿಗೆ ಉತ್ತರಿಸುವರು. |
| | | | 30 | ನೀಡಿರುವ ಕವಿತೆ / ಪದ್ಯವನ್ನು ಗ್ರಹಿಸಿಕೊಂಡು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವರು. |